ಹೊರಳಾಡುವವರಿಗೆ, ಲೇ ಪಂಗಾ ಎಂದು ತೊಡೆ ತಟ್ಟಿ ಬಾಜಿಕಟ್ಟಿ ಗಂಡುಗಳನ್ನು ಯುದ್ಧಕ್ಕೆ ಆಹ್ವಾನಿಸುವವರಿಗೆ, ಇವುಗಳಿಂದೆಲ್ಲ ಏನೇನೂ ಪ್ರಯೋಜನವಿಲ್ಲ. ಮನೆಯೊಳಗೆಯೇ ಇದ್ದು ಕಿಟಕಿಯಿಂದ ಇಣುಕುವ ನಾಜೂಕು ರಾಣಿಯರಿಗೆ ಮಾತ್ರ ಇವು ಉಪಯೋಗಕ್ಕೆ ಬರಬಹುದು. ಆದರೂ ಕಾಡಿಂದ ಹುಲಿರಾಯ ತನ್ನ ದಾಯಾದಿ ಹೇಗಿದ್ದಾನೆಂದು ನೋಡಲು ಬಂದರೆ, 'ಖಂಡಿತ ನನ್ನ ಮಲವೂ ನಿನಗೆ ನೋಡಲು ಸಿಗಲಾರದು' ಎಂಬ ಬೆಕ್ಕಪ್ಪನ ಮಾತು ಎಂದೆಂದಿಗೂ ನಿಜವೇ ಆಗುವ ಕಾಲ ಬಂದಿದೆ. ಥರ್ಮೋಬಾಲ್‌ಗಳೊಳಗೆ ಹುದುಗಿದ ಅದನ್ನು ಹುಡುಕುವ ತಾಳ್ಮೆ ಹುಲಿಯಪ್ಪನಿಗೂ ಇರಲಾರದು. ಅದಿರಲಿ, ಬೆಕ್ಕಿನ ಈ ಕಸಿನ್ ಬ್ರದರಿಗೆ ತನ್ನ ಮಲವನ್ನು ಮುಚ್ಚುವ ಅಭ್ಯಾಸ ಇಲ್ಲ ಎಂದು ಕೇಳಿ ತಿಳಿದಿದ್ದೇವೆ. ಅದಕ್ಕೆ ಕಾರಣ ಗೊತ್ತಿದ್ದವರು ತಿಳಿಸಿ.

ನಮ್ಮ ಸಂಗಮೇಶ್ವರರು ಕುರ್ಚಿಯಲ್ಲೋ ಸೋಫಾದಲ್ಲೋ ಪವಡಿಸಿದ್ದು ಕಂಡರೆ, ಪಕ್ಕದ ಮನೆ ನರ್ಸರಿ ಹುಡುಗ, 'ಕ್ಯಾಟ್ ಸ್ಲೀಪ್ ಎವ್ವರಿವೇರ್, ಎವ್ವರಿ ಟೇಬಲ್, ಎವ್ವರಿ ಚೇರ್...' ಎಂದು ಹಾಡುತ್ತಾನೆ. ಎಷ್ಟೇ ಜೋರಾಗಿ ಹಾಡಿ ಅವನೆದುರು ಕುಣಿದರೂ, ಈ ನಮ್ಮ ಸಂಗಣ್ಣ ಮುಖವನ್ನು ಕೈಗಳೊಳಗೆ ಹುದುಗಿಸಿದ್ದಾನೆ ಎಂದಾದರೆ, 'ಸತ್ಸಂಗತ್ವೇ ನಿಸ್ಸಂಗತ್ವಂ ನಿಸ್ಸಂಗತ್ವೇ ನಿರ್ಮೋಹತ್ವಂ| ನಿರ್ಮೋಹತ್ವೇ ನಿಶ್ಚಲತತ್ತ್ವಂ ನಿಶ್ಚಲತತ್ತ್ವೇ ಜೀವನ್ಮುಕ್ತಿಃ||' ಎಂದು ಆದಿಶಂಕರರು ಹೇಳಿದ, ಸತ್ಸಂಗದಿಂದ ಜೀವನ್ಮುಕ್ತಿಯ ಕಡೆಗೆ ಚಲಿಸುವ ತತ್ತ್ವಗಳೆಲ್ಲವೂ ಆತನಿಗೆ ಅಕ್ಷರಶಃ ಸಿದ್ಧಿಯಾಗಿದೆ ಎಂದೇ ಅರ್ಥ. ಮತ್ತೆ ಯಾವ ಮೀನಿನ ವಾಸನೆಯೂ ಅವನನ್ನು ಈ ಭವದ ಬಾಗಿಲಿಗೆ ಎಳೆದು ತರಲಾರದು. ಎಷ್ಟೇ ಆದರೂ 'ಸತ್ಯವೇ ನಮ್ಮ ತಾಯಿ ತಂದೆ ಸತ್ಯವೇ ನಮ್ಮ ಬಂಧು ಬಳಗ...' ಎಂದ ಪುಣ್ಯಕೋಟಿಯನ್ನು 'ಎನ್ನ ಒಡಹುಟ್ಟಕ್ಕ' ಎಂದ ವಂಶಕ್ಕೆ ಸೇರಿದವನಲ್ಲವೇ? ಹಾಗಾಗಿ, ಈ ಮೋಸದ ಪ್ರಪಂಚದಲ್ಲಿ ಎಲ್ಲದಕ್ಕೂ ಪ್ರತಿಕ್ರಿಯೆ ಕೊಡುತ್ತಾ ಹೋದರೆ ಸುಳ್ಳನ್ನೇ ಹೆಣೆಯುತ್ತಾ ಹೋಗಬೇಕು ಎಂದು ಈ ರೀತಿಯ ನಿಶ್ಚಲತತ್ತ್ವವನ್ನು ರೂಢಿಸಿಕೊಂಡಿದ್ದಾನೋ ಏನೋ? ಆದರೂ ಈಗೀಗ ಕಟ್ಟಿಗೆ ಒಲೆಗಳಿಲ್ಲದೆ ಚಳಿಗಾಲ ಮಳೆಗಾಲಗಳಲ್ಲಿ ಇವನ ಪೈಕಿಯವರ ಈ ದೈವಿಕ ನಿದ್ದೆಗೆ ಭಂಗ ಬಂದದ್ದಂತೂ ಸತ್ಯ. ಆನ್ ಮಾಡಿಟ್ಟ ಲ್ಯಾಪ್‌ಟಾಪ್‌ನಲ್ಲೋ, ಆಗ ತಾನೆ ತಂದು ನಿಲ್ಲಿಸಿದ ಕಾರಿನ ಬಾನೆಟ್‌ನಲ್ಲೋ, ವಿದ್ಯುತ್ ಇನ್‌ವರ್ಟರ್ ಮೇಲೋ ಪವಡಿಸುವ ಪರ್ಯಾಯ ವ್ಯವಸ್ಥೆಗಳನ್ನು ಇವರು ಕಂಡುಕೊಂಡಿದ್ದಾರಾದರೂ, ಧಗಧಗ ಉರಿಯುವ ಕಟ್ಟಿಗೆ ಒಲೆಗೆ ಅವು ಸಮನಾಗಲಾರವು. ಇರಲಿ, ಈಗ ಸಂಗ ಪುನಃ ಕಾಣೆಯಾಗಿದ್ದಾನೆ. ಯಾವ ಪರಸಂಗದಲ್ಲಿ ತಲ್ಲೀನನಾಗಿ ಇದ್ದಾನೋ?... ಯಾವಾಗ ಯಾರ ಮನೆಗೆ ಪಾಸ್‌ವರ್ಡ್ ಇಲ್ಲದೆ ಪದೇ ಪದೇ ಲಾಗಿನ್ ಆಗುತ್ತಿದ್ದಾನೋ ಕಂಡವರಾರು?... ಯಾವ ಸತ್ಸಂಗದಿಂದ ಮುಕ್ತಿಯನ್ನು

